

ಡೇವಿಡ್, ಜೂಲಿ, ಐನ್ಸ್ ಮತ್ತು ಕ್ಲೈರ್

# ಇಂಗ್ಲಿಷ್ ಭಾಷೆ 'ಪ್ಲಸ್ ಪಾಯಿಂಟ್'

ಫ್ರೆಂಚರಿಗೆ ಇಂಗ್ಲಿಷ್ ಎಂದರೆ ಅವಜ್ಞೆ. ಅವರು ಫ್ರೆಂಚ್ ಭಾಷೆ ಬಿಟ್ಟರೆ ಬೇರೆ ಭಾಷೆಗಳನ್ನು ಮಾತನಾಡಲು ಇಷ್ಟಪಡಲ್ಲ. ಆದರೆ ಅವರಿಗೆ ಇಂಗ್ಲಿಷ್ ಕಲಿಯುವವರನ್ನು, ಇಂಗ್ಲಿಷ್‌ನಲ್ಲೇ ಮಾತನಾಡುವವರನ್ನು ಕಂಡರೆ ಪ್ರೀತಿ. ಫ್ರಾನ್ಸ್‌ನಿಂದ ಕಳೆದ ವರ್ಷ (2013ರಲ್ಲಿ) ಬೆಂಗಳೂರಿಗೆ ಬಂದು ನೆಲೆ ನಿಂತ ಡೇವಿಡ್ ಮತ್ತು ಕ್ಲೈರ್ ದಂಪತಿಗೆ ಇಲ್ಲಿನ ಜನರ ಇಂಗ್ಲಿಷ್ ಭಾಷಾಭಿಮಾನ ಅಚ್ಚರಿ ತಂದಿದೆ.

'ಇಂಗ್ಲಿಷ್ ವಿಶ್ವ ಭಾಷೆ. ಇದನ್ನು ಕಲಿತರೆ ಜಗತ್ತಿನ ಯಾವ ಭಾಗದಲ್ಲಾದರೂ ಹೋಗಿ ಬದುಕಬಹುದು ಎಂಬ ಕಟುಸತ್ಯದ ಬಗ್ಗೆ ನಮಗೆ ಅರಿವಿದೆ. ಸುಲಭವಾಗಿ ಸಂವಹನ ಮಾಡಲು ಇಂಗ್ಲಿಷ್ ಅಗತ್ಯ ಎಂಬುದು ನಮಗೆ ಮನವರಿಕೆಯಾಗಿದೆ' ಎನ್ನುತ್ತಾರೆ ಬೆಂಗಳೂರಿನಲ್ಲಿ ಬಹುರಾಷ್ಟ್ರೀಯ ಕಂಪೆನಿಯಲ್ಲಿ ಉದ್ಯೋಗಿಯಾಗಿ ರುವ ಡೇವಿಡ್.

'ಇಲ್ಲಿನ ಜನರಿಗೆ ಇಂಗ್ಲಿಷ್ ಭಾಷೆ ಚೆನ್ನಾಗಿ ಗೊತ್ತಿರುವುದೇ 'ಪ್ಲಸ್ ಪಾಯಿಂಟ್'' ಎನ್ನುವ ಡೇವಿಡ್, ಇಲ್ಲಿನ ಸಂಸ್ಕೃತಿ, ಬಹುಭಾಷೆ ವೈವಿಧ್ಯಮಯ ವಾಗಿದೆ. ನಮ್ಮ ದೇಶಕ್ಕೂ ಇಲ್ಲಿಗೂ ಬಹಳ ವ್ಯತ್ಯಾಸವಿದೆ. ಇಲ್ಲಿಯವರು ಸಂಘ ಜೀವಿಗಳು. ತಮ್ಮ ಜತೆಗಿರುವವರ ಬಗ್ಗೆ ಅಪಾರ ಕಾಳಜಿ ವಹಿಸುತ್ತಾರೆ. ನಮ್ಮ ದೇಶದಲ್ಲಿ ಹೀಗಿಲ್ಲ. ಒಬ್ಬರನ್ನೊಬ್ಬರು ಹಚ್ಚಿಕೊಳ್ಳುವುದೇ ಇಲ್ಲ. ಕೌಟುಂಬಿಕ ವಾಗಿಯೂ ಇಲ್ಲಿ ಬಹಳ ಬಾಂಧವ್ಯ ಬೆಸೆಯುತ್ತಾರೆ. ದೇಶ, ಭಾಷೆಯನ್ನು ಬಹುವಾಗಿ ಪ್ರೀತಿಸುತ್ತಾರೆ' ಎನ್ನುತ್ತಾರೆ.

ಇಲ್ಲಿನ ಬಹುಧರ್ಮದ ಬಗ್ಗೆಯೂ ಇವರಿಗೆ ಕುತೂಹಲವಿದೆ. ದೇವಸ್ಥಾನಗಳು, ಚರ್ಚ್, ಮಸೀದಿ ಎಲ್ಲವೂ ಭಾವೈಕ್ಯ ಸಾರುತ್ತವೆ. ಜತೆಗೆ ಜನ ಶಾಂತಿಯಿಂದ ಬದುಕುವುದು ನೋಡಿ ಇವರಿಗೆ ಖುಷಿಯಾಗುತ್ತದೆಯಂತೆ. ಧಾರ್ಮಿಕತೆಗೆ ಇಲ್ಲಿ ಹೆಚ್ಚಿನ ಬೆಲೆಯಿದೆ ಎಂಬುದು ಇವರ ನಿಲುವು. ದೇವರ ಮೇಲೆ ಅಪಾರ ನಂಬಿಕೆ, ಶ್ರದ್ಧೆ ಇದೆ. ಹಬ್ಬಗಳ ಆಚರಣೆಯೂ ವರ್ಣನೆಗೆ ನಿಲುಕದ್ದು ಎಂಬುದು ಡೇವಿಡ್ ಅಭಿಪ್ರಾಯ.

ಡೇವಿಡ್, ಪತ್ನಿ ಕ್ಲೈರ್ ಮತ್ತು ಮಕ್ಕಳಾದ ಜೂಲಿ ಮತ್ತು ಐನ್ಸ್ ಜತೆಗೆ ಇಂದಿರಾನಗರದಲ್ಲಿ ವಾಸವಾಗಿದ್ದಾರೆ. ಇಲ್ಲೇ ಇರುವ ಬಹುರಾಷ್ಟ್ರೀಯ ಕಂಪೆನಿಯಲ್ಲಿ ಡೇವಿಡ್ ಖರೀದಿ ವಿಭಾಗದ (ಪರ್ಚೇಸಿಂಗ್ ಡಿವಿಜನ್) ಮುಖ್ಯಸ್ಥ. ಜತೆಗೆ ಕಂಪೆನಿಯ ವಿವಿಧ ಪ್ರಾಜೆಕ್ಟ್‌ಗಳಲ್ಲೂ ತೊಡಗಿಸಿ ಕೊಂಡಿದ್ದಾರೆ. ಕ್ಲೈರ್ ಇದೇ ಕಂಪೆನಿಯಲ್ಲಿ ಕ್ವಾಲಿಟಿ ಮ್ಯಾನೇಜರ್. ಬೆಂಗಳೂರಿಗೆ ಬರುವ ಮುನ್ನ ಡೇವಿಡ್, ಕ್ಲೈರ್ ಇಬ್ಬರೂ ಒಂದೇ ಕಂಪೆನಿಯಲ್ಲಿ ಜಪಾನ್ ಮತ್ತು ಫ್ರಾನ್ಸ್‌ಗಳಲ್ಲಿ ಕೆಲಸ ಮಾಡಿದವರು.

'ನಾನು ಈ ಹಿಂದೆ ಫ್ರಾನ್ಸ್, ಜಪಾನ್‌ಗಳಲ್ಲಿ ಕೆಲಸ ಮಾಡಿದ್ದರೂ ಬೆಂಗಳೂರಿನಲ್ಲಿ ಕೆಲಸ ಮಾಡುವುದು ವಿಭಿನ್ನ ಅನುಭವ ಕೊಡುತ್ತಿದೆ. ಇಲ್ಲಿ ಕೆಲಸದ ವಾತಾವರಣ ಚೆನ್ನಾಗಿದೆ. ಇಲ್ಲಿಯ ಜನ ಬಹಳ ಬೇಗನೆ ಬೆರೆಯುತ್ತಾರೆ. ಇದರಿಂದ ಹೊಂದಾಣಿಕೆಯಿಂದ ಕೆಲಸ ಮಾಡುವುದು ಇಲ್ಲಿ ಸಾಧ್ಯವಾಗಿದೆ. ಜತೆಗೆ ಜನ ವಿಶಾಲ ಮನೋಭಾವದವರು. ಸಂಘಟನಾ ಕೌಶಲ್ಯ ಇಲ್ಲಿಯವರಿಗೆ ಚೆನ್ನಾಗಿ ಒಲಿದಿದೆ. ಹೀಗಾಗಿ ಗುಣಮಟ್ಟದ ಫಲಿತಾಂಶ ಕೆಲಸದಲ್ಲಿ ಸಿಗುತ್ತಿದೆ' ' ಎನ್ನುತ್ತಾರೆ ಕ್ಲೈರ್.

'ಇಲ್ಲಿನ ಸಹೋದ್ಯೋಗಿಗಳ ಸಮಯಪ್ರಜ್ಞೆ, ಕರ್ತವ್ಯಕ್ಕೆ ಹಾಜರಾಗುವ ರೀತಿ, ರಜೆ ತೆಗೆದುಕೊಳ್ಳದೇ ಸಮಯದ ಪರಿವೆ ಇಲ್ಲದೆ ಕೆಲಸ ನಿರ್ವಹಿಸುವುದು ನೋಡಿದರೆ ಬಹಳ ಆಶ್ಚರ್ಯವಾಗುತ್ತದೆ. ಈ ರೀತಿಯ ಕರ್ತವ್ಯ ಪ್ರಜ್ಞೆಯನ್ನು ಹಿಂದೆಲ್ಲೂ ನೋಡಿಲ್ಲ' ಎಂದು ಮೆಚ್ಚುಗೆ ಮಾತುಗಳನ್ನಾಡುತ್ತಾರೆ ಡೇವಿಡ್.

### ನೈರ್ಮಲ್ಯಕ್ಕೆ ಆದ್ಯತೆ ನೀಡಬೇಕು

'ನಗರದ ಕೆಲವು ಭಾಗಗಳಲ್ಲಿ ವಿಪರೀತ ಜನದಟ್ಟಣೆ. ಟ್ರಾಫಿಕ್‌ನದ್ದೇ ದೊಡ್ಡ ಸಮಸ್ಯೆ. ಜತೆಗೆ ಎಲ್ಲೆಂದರಲ್ಲಿ ಕಸ ಎಸೆಯುವುದು, ಪ್ಲಾಸ್ಟಿಕ್, ಬಾಟಲಿ ಚೂರುಗಳು, ಪೇಪರ್, ಗಾಜಿನ ಬಾಟಲಿಗಳ ರಾಶಿ ನೋಡಿದರೆ ಇಲ್ಲಿ ಸರ್ಕಾರ ನೈರ್ಮಲ್ಯಕ್ಕೆ ಮತ್ತಷ್ಟು ಆದ್ಯತೆ ನೀಡಬೇಕಿದೆ ಎನಿಸುತ್ತದೆ' ಎನ್ನುತ್ತಾರೆ ಡೇವಿಡ್.

ಈ ಬಗ್ಗೆ ಕ್ಲೈರ್ ಅವರಿಗೂ ಅಸಮಾಧಾನ ಇದೆ. 'ನಗರದ ಕೆಲವೊಂದು ಬಡಾವಣೆಗಳಲ್ಲಿ ಕಸ ವಿಲೇವಾರಿ ವ್ಯವಸ್ಥೆ ಸರಿಯಾಗಿಲ್ಲ ಎಂಬುದನ್ನು ಗುರುತಿಸಿದ್ದೇನೆ. ಇದರಿಂದ ಆರೋಗ್ಯಕ್ಕೂ ತೊಂದರೆಯಿದೆ. ಈ ಬಗ್ಗೆ ಜನ ಎಚ್ಚೆತ್ತುಕೊಳ್ಳಬೇಕು' ಎಂದು ಸಲಹೆ ನೀಡುತ್ತಾರೆ ಕ್ಲೈರ್.

'ಪ್ರವಾಸಿ ತಾಣಗಳ ವೀಕ್ಷಣೆ ನಮ್ಮ ಬಹು ಪ್ರಿಯವಾದ ಹವ್ಯಾಸ. ವಾರಾಂತ್ಯಗಳಲ್ಲಿ ಪ್ರವಾಸಿ ತಾಣಗಳಿಗೆ ಭೇಟಿ ನೀಡುತ್ತೇವೆ. ಈಗಾಗಲೇ ಗೋವಾ, ಕೇರಳ, ಪುದುಚೇರಿ, ಮುಂಬಯಿ, ಹಾಸನ, ಮಂಗಳೂರು ನೋಡಿ ಬಂದಿದ್ದೇವೆ. ಉತ್ತರ ಭಾರತದಲ್ಲೂ ಅನೇಕ ಪ್ರೇಕ್ಷಣೀಯ ಸ್ಥಳಗಳಿವೆ ಎಂಬುದನ್ನು ಕೇಳಿದ್ದೇವೆ. ಸದ್ಯದಲ್ಲೇ ಅಲ್ಲೂ ಹೋಗಿ ಬರುವ ಯೋಚನೆಯಿದೆ' ಎನ್ನುತ್ತಾರೆ ಈ ದಂಪತಿ.

ಮಕ್ಕಳಾದ ಜೂಲಿ ಮತ್ತು ಐನ್ಸ್ ಇಬ್ಬರೂ ಬೆಂಗಳೂರಿನಲ್ಲೇ ಇಂಟರ್‌ನ್ಯಾಷನಲ್ ಸ್ಕೂಲ್‌ನಲ್ಲಿ ಓದುತ್ತಿದ್ದಾರೆ. ವರ್ಷಕ್ಕೊಮ್ಮೆ ಫ್ರಾನ್ಸ್‌ಗೆ ಹೋಗಿ ಬರುವ ಈ ಕುಟುಂಬಕ್ಕೆ ಬೆಂಗಳೂರಿನಲ್ಲಿ ಬಂಧು ಬಳಗ ಯಾರೂ ಇಲ್ಲ. ಆದರೆ ತಮ್ಮ ದೇಶದ ಹಲವಾರು ಕುಟುಂಬ ಬೆಂಗಳೂರಿನಲ್ಲಿದೆ.

■ ಅವನೀಶ್